ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

16

ಇಲಾಖೆ / ವಿಷಯ : DEPARTMENT / SUBJECT: ವಿಧಾನ ಪರಿಷತ್ - ಉಪ ಸಭಾಪತಿ

ಪತ್ರಿಕೆಯ ಹೆಸರು : NAME OF THE NEWS PAPER: ಸಂಯುಕ್ತ ಕರ್ನಾಟಕ ದಿನಾಂಕ : DATE : 28/1/2021

# ಹೋರಾಟದ ಅಸ್ತ್ರಕ್ಕೆ ಕೈ ಸಾಣೆ

ಸಂ.ಕ 28/1/21

ವಿಧಾನ ಪರಿಷತ್‌ನಲ್ಲಿ ಸದಸ್ಯರು ಡಿಸೆಂಬರ್ 15 ರಂದು ನಡೆದ ಘಟನೆಯನ್ನೇ ಜಂಟಿ ಅಧಿವೇಶನದಲ್ಲಿ ಹೋರಾಟಕ್ಕೆ ಪ್ರತಿಭಟನಾ ಅಸ್ತ್ರವಾಗಿಸಿಕೊಳ್ಳಲು ಪ್ರತಿಪಕ್ಷ ಕಾಂಗ್ರೆಸ್ ಮುಂದಾಗಿದೆ.

ಮೇಲ್ಮನೆಯಲ್ಲಿ ಸದಸ್ಯರ ಗೂಂಡಾ ವರ್ತನೆ ನಿಜಕ್ಕೂ ರಾಜ್ಯಕ್ಕೆ ಅಪಮಾನವಾಗುವಂತದ್ದು. ದೇಶಕ್ಕೇ ಒಂದು ತಪ್ಪು ಸಂದೇಶವನ್ನು ರವಾನಿಸಿರುವ ಈ ಘಟನೆ ಆಡಳಿತಪಕ್ಷ ಬಿಜೆಪಿ ಪ್ರೇರಿತ ಎನ್ನುವುದು ಕಾಂಗ್ರೆಸ್‌ನ ವಾದ. ದೇಶದ ಸಂಸದೀಯ ಪ್ರಜಾಪ್ರಭುತ್ವ ಇತಿಹಾಸದ ಕಪ್ಪು ಅಧ್ಯಾಯ. ಬಿಜೆಪಿ ಸದಸ್ಯರು ಹಾಡುಹಗಲೇ ಸಂವಿಂಧಾನಕ್ಕೆ ಅತ್ಯಾಚಾರ ಎಸಗಿದ್ದಾರೆ, ಪ್ರಜಾಪ್ರಭುತ್ವದ ಕಗ್ಗೊಲೆ ನಡೆಸಿದ್ದಾರೆ ಎಂಬುದನ್ನೇ ಸರ್ಕಾರದ ವಿರುದ್ಧ ಪ್ರತ್ಯಸ್ತ್ರವಾಗಿಸಲು ಕಾಂಗ್ರೆಸ್ ಸಜ್ಜಾಗಿದೆ.

ವಿಧಾನಸಭೆ ಮತ್ತು ವಿಧಾನಪರಿಷತ್ ಕಲಾಪ ನಡೆಸಲು ಸರ್ವಸಮ್ಮತಿಯಿಂದ ರಚಿಸಲಾದ ನಿಯಮಾವಳಿಗಳಿವೆ. ವಿಧಾನ ಪರಿಷತ್ ಸಭಾಪತಿ ಸಮ್ಮತಿಪೂರ್ವ ಅನುಪಸ್ಥಿತಿಯಲ್ಲಿ ಉಪಸಭಾಪತಿಯವರಿಗೆ ಅವಕಾಶವನ್ನು ನೀಡಬಹುದೆಂದು ಸದನದ ನಿಯಮಾವಳಿ ಹೇಳಿದೆ. ಆದರೆ ಇದ್ಯಾವುದೂ ಪಾಲನೆಯಾಗಿಲ್ಲ. ಜೊತೆಗೆ ಸರ್ಕಾರದ ಡಿಸಿಎಂ, ಸಚಿವರೇ ಮುಂದೆನಿಂತು ಗಲಭೆಗೆ ಪ್ರಚೋದಿಸಿದ್ದಾರೆಂಬುದು ಕೈ ನಾಯಕರ ಆಪಾದನೆ. ಇದನ್ನೇ ಪ್ರಮುಖವಾಗಿ ಪ್ರಸ್ತಾಪಿಸಿ ಸರ್ಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ಪ್ರತಿಪಕ್ಷ ತೀರ್ಮಾನಿಸಿದೆ.

ಉಪಸಭಾಪತಿ ಆತ್ಮಹತ್ಯೆ ಮಾಡಿಕೊಳ್ಳುವ ಹಂತಕ್ಕೆ ಘಟನೆ ಧರ್ಮೇಗೌಡರಿಗೆ ಅವಮಾನ ಮಾಡಿತ್ತೆಂಬುದು ಗಮನಾರ್ಹ. ಹಾಗಾಗಿ ಬಿಜೆಪಿ-ಜೆಡಿಎಸ್ ನಾಯಕರ ಕ್ಷಮಾಪಣೆ ಜೊತೆಗೆ ಸಚಿವರಿಬ್ಬರ ರಾಜೀನಾಮೆಗೆ ಪಟ್ಟುಹಿಡಿಯಲು ಕಾಂಗ್ರೆಸ್ ಆಗ್ರಹಿಸಲು ನಿರ್ಧರಿಸಿದೆ. ಜೊತೆಗೆ ಈಗಾಗಲೇ ಸಭಾಪತಿ ನೇಮಿಸಿದ್ದ ತನಿಖಾ ಸಮಿತಿ ಸಲ್ಲಿಸಿರುವ ಮಧ್ಯಂತರ ವರದಿ ಸರ್ಕಾರದ ಸಚಿವರ ವಿರುದ್ಧವೇ ಬೊಟ್ಟು ಮಾಡಿರುವುದು ಕೈ ಹೋರಾಟಕ್ಕೆ ಪುಷ್ಟಿ ಕೊಡಲಿದೆ.



“ಶತಮಾನದ ಇತಿಹಾಸದ ಶಾಸನಸಭೆಗೆ ಕಳಂಕ ತಂದ ಪೂರ್ವಯೋಜಿತ ಕೃತ್ಯವನ್ನು ಕಾಂಗ್ರೆಸ್ ಸಹಿಸುವುದಿಲ್ಲ. ಇದನ್ನು ಅಧಿವೇಶನದಲ್ಲಿ ಪ್ರಸ್ತಾಪಿಸುತ್ತೇವೆ. ಜ.28ರ ಶಾಸಕಾಂಗಪಕ್ಷದ ಸಭೆಯಲ್ಲಿ ಹೋರಾಟದ ರೂಪುರೇಷೆ ಬಗ್ಗೆ ಅಂತಿಮವಾಗುತ್ತದೆ. ಪ್ರಜಾಪ್ರಭುತ್ವ ರಕ್ಷಿಸುವ ಹೊಣೆಯಿಂದ ನಾವು ನುಣುಚಿಕೊಳ್ಳುವುದಿಲ್ಲ.

■ **ಎಂ.ನಾರಾಯಣಸ್ವಾಮಿ** | ಕಾಂಗ್ರೆಸ್ ಮುಖ್ಯ ಸಚೇತಕ ವಿಧಾನಪರಿಷತ್

“ಸಭಾಪತಿಗಳೇ ಒಳಗೆ ಬರದಂತೆ ಆಡಳಿತ ಪಕ್ಷದಿಂದ ಕುತಂತ್ರ, ದಬ್ಬಾಳಿಕೆ ನಡೆದಿದೆ. ಗೂಂಡಾ ಸಂಸ್ಕೃತಿ ತೋರಿದ್ದಾರೆ. ವಿರೋಧಿ ಕಾಂಗ್ರೆಸ್ ಪಕ್ಷದ ಕಡೆಯಿಂದಲೂ ಅಷ್ಟೇ ತಪ್ಪುಗಳಾಗಿವೆ. ಇದಕ್ಕೆ ಎಲ್ಲರೂ ಹೊಣೆ ಹೊರಬೇಕು.

■ **ಬಿ.ಆರ್. ಪಾಟೀಲ್**

| ಮಾಜಿ ಉಪ ಸಭಾಪತಿ ವಿಧಾನ ಪರಿಷತ್

“ಪರಿಷತ್ತಿನಲ್ಲಿ ಸದಸ್ಯರೇ ಕೈ ಕೈ ಮಿಲಾಯಿಸಿ ತಳ್ಳಾಟಕ್ಕೆ ಇಳಿದಿದ್ದರಿಂದ ಪ್ರಜಾಸತ್ತೆ ಮತ್ತು ಸಂಸದೀಯ ಮೌಲ್ಯಗಳು, ಘನತೆಗೆ ಬಲವಾದ ಪೆಟ್ಟು ಬಿದ್ದಂತಾಗಿದೆ. ಈ ಘಟನಾವಳಿ ಉಪ ಸಭಾಪತಿಯ ಜೀವವನ್ನೇ ಬಲಿ ತೆಗೆದುಕೊಂಡಿದ್ದು ಪರಿಸ್ಥಿತಿ ಕೈಮೀರಿ ಹೋಗಿದೆಯೆಂಬುದನ್ನು ಸಾರುತ್ತದೆ. ವಿಧಾನ ಮಂಡಲಕ್ಕೆ ಸೂಕ್ತ, ಸಮರ್ಥ ಪ್ರತಿನಿಧಿಗಳನ್ನು ಆಯ್ಕೆಗೊಳಿಸಿ ಘನತೆಯನ್ನು ಮರುಸ್ಥಾಪಿಸುವುದು ಎಲ್ಲರ ಜವಾಬ್ದಾರಿಯಾಗಿದೆ.

■ **ಡಾ. ಶರದ್ ಎಂ. ತಂಗಾ**

| ಖ್ಯಾತ ಸರ್ಜನ್ ಹಾಗೂ ತಜ್ಞರು, ಕಲಬುರಗಿ

“ಮೇಲ್ಮನೆ ಪವಿತ್ರವಾದ ಸ್ಥಳ. ತಿಳುವಳಿಕೆಯುಳ್ಳ, ಅನುಭವವುಳ್ಳ ಹಿರಿಯರನ್ನು ಕೂಡಿಸಲಾಗುತ್ತಿತ್ತು. ಕೆಳಮನೆಯಲ್ಲಿ ಮಂಡಿಸಿದ ವಿಷಯಗಳನ್ನು ಮೇಲ್ಮನೆಯಲ್ಲಿ ಕೂಲಂಕುಷವಾಗಿ ಚರ್ಚಿಸಲಾಗುತ್ತಿತ್ತು. ಇಂಥ ಮೇಲ್ಮನೆ ಇಂದು ಸೋತವರನ್ನು, ದುಡ್ಡುಕೊಟ್ಟವರನ್ನು ಸೇರಿಸುವ ಹಾಳುಮನೆಯಾಗಿ ಮಾರ್ಪಟ್ಟಿದೆ. ನಡೆಯಬಾರದ ಘಟನೆ ನಡೆದು ಕುಲಗೆಟ್ಟು ಹೋಗಿರುವ ಮೇಲ್ಮನೆಯ ಘನತೆ ಮರುಕಳಿಸುವುದು ಕಷ್ಟಸಾಧ್ಯ

■ **ಎಚ್.ಎಸ್.ದೊರೆಸ್ವಾಮಿ**

| ಸ್ವಾತಂತ್ರ್ಯ ಹೋರಾಟಗಾರ

“ರಾಜ್ಯದ ಭವಿಷ್ಯ ನಿರ್ಮಾಣ ಮಾಡುವಂತಹ ತಾಣದಲ್ಲಿ ಗಲಾಟೆ ನಡೆಯವುದು ಜನರಿಗೆ ತಪ್ಪು ಸಂದೇಶ ರವಾನಿಸುತ್ತದೆ. ಯಾರನ್ನು ಆದರ್ಶ ಎಂದು ಭಾವಿಸುತ್ತಾರೆಯೋ ಅವರೇ ಈ ರೀತಿ ನಡೆದುಕೊಂಡರೆ ಜನಸಾಮಾನ್ಯರಿಂದ ಸೌಜನ್ಯ ನಿರೀಕ್ಷಿಸುವುದಾದರೂ ಹೇಗೆ? ಎಲ್ಲ ಪಕ್ಷಗಳೂ ಇದನ್ನು ಒಂದು ಎಚ್ಚರಿಕೆಯ ಘಂಟೆ ಎಂದು ಭಾವಿಸಬೇಕು.

■ **ರಾಣಿ ಸತೀಶ್** | ಮಾಜಿ ಸಚಿವೆ